ಪ್ರಾಬ್ಲಮ್‌ನ್ನು ಸಾಲ್ವ್ ಮಾಡುವುದಕ್ಕೆ ಬಾರ್ಡರ್ ಡೆವೆಲಪ್‌ಮೆಂಟ್ ಪ್ರೊಗ್ರಾಮ್ ಕೂಡ ಮಾಡಿದ್ದೇವೆ. ಈಗಾಗಲೇ ತಿರುವಣ್ಣದಲ್ಲಿ 85 ಲಕ್ಷ ರೂ.ಗಳನ್ನು ಖರ್ಚು ಮಾಡಿದ್ದೇವೆ. ಈ ಪ್ರದೇಶಕ್ಕೆ ಎಂ.ಪಿ. ಮತ್ತು ಎಂ.ಎಲ್.ಎ.ಗಳ ಜೊತೆ ಭೇಟಿ ನೀಡಿದ್ದೇವೆ. ನಕ್ಸಲೈಟ್ ಆಕ್ಟಿವಿಟಿ ಬರುವಂಥ ಪ್ರದೇಶದಲ್ಲಿ ಬಾರ್ಡರ್ ಡೆವೆಲಪ್‌ಮೆಂಟ್ ಪ್ರೊಗ್ರಾಮ್ ಬಗ್ಗೆ ಸಹ ಸರ್ಕಾರ ಕ್ರಮ ತೆಗೆದುಕೊಳ್ಳಬೇಕೆಂದು ಹೇಳಿ ಅದಕ್ಕೆ ಸರ್ಕಾರ ಹಣವನ್ನು ಒದಗಿಸುವುದಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಪ್ರಶ್ನೆ ಕೇಳಿದ ಮುಖ್ಯ ಹಿನ್ನೆಲೆಯ ಬಗ್ಗೆ ಒಂದು ಉಪ ಪ್ರಶ್ನೆಯನ್ನು ಕೇಳುತ್ತೇನೆ. ಇತ್ತೀಚೆಗೆ ಗದ್ದಾರ್‌ರವರು ಬೀದರ್‌ಗೆ ಬಂದಿದ್ದಾಗ ಅವರನ್ನು ರಾಜ್ಯದಿಂದ ಗಡಿಪಾರು ಮಾಡಿ, ಕಾರ್ಯಕ್ರಮವನ್ನು ನಿಲ್ಲಿಸಬಾರದೆಂದು ಸರ್ಕಾರ ಹೇಳಿ ಕ್ರಮ ತೆಗೆದುಕೊಂಡಿತು. ಇದರಿಂದ ಏನಾಯಿತು ಎಂದರೆ, ಅನಾವಶ್ಯಕವಾಗಿ ಅವರಿಗೆ ಇಂಪಾರ್ಟೆನ್ಸ್ ಕೊಟ್ಟು ಈ ತರಹದ ಆಕ್ಟಿವಿಟೀಸ್ ಹೆಚ್ಚು ಆಗುವುದಕ್ಕೆ ಕಾರಣವಾಯಿತು ಎಂದು ನನ್ನ ಅಭಿಪ್ರಾಯ. ಆದ್ದರಿಂದ ರಾಜ್ಯ ಸರ್ಕಾರದಿಂದ ಆಂಧ್ರ ಪ್ರದೇಶದ ಮುಖ್ಯ ಮಂತ್ರಿಗಳನ್ನು ಮತ್ತೆ ಸಂಬಂಧಪಟ್ಟ ಗೃಹ ಮಂತ್ರಿಗಳ ಜೊತೆ ಮಾತುಕತೆಯನ್ನು ನಡೆಸಿದ್ದೀರಾ? ಇದರ ಬಗ್ಗೆ ಸಂಬಂಧಪಟ್ಟ ಅಧಿಕಾರಿಗಳ ಜೊತೆ ಸಂಪರ್ಕವನ್ನು ಇಟ್ಟುಕೊಂಡಿದೆಯೇ ಎಂದು ಕೇಳಬಯಸುತ್ತೇನೆ. ಪ್ರೈವೇಟಾಗಿ ಮಾನ್ಯ ಮಂತ್ರಿಗಳಿಗೆ ಇದರ ಬಗ್ಗೆ ಕೆಲವು ವಿಷಯಗಳನ್ನು ಹೇಳುತ್ತೇನೆ. ಮುಖ್ಯವಾಗಿ ಆಂಧ್ರ ಸರ್ಕಾರದ ಜೊತೆ ಮಾತುಕತೆ ನಡೆಸಿದ್ದೀರಾ?

ಶ್ರೀ ಧರ್ಮಸಿಂಗ್ ನಾರಾಯಣಸಿಂಗ್ : ಆ ರಾಜ್ಯದ ಪೋಲೀಸ್ ಕಮೀಷನರ್ ಹಾಗೂ ಡಿ.ಐ.ಜಿ. ಇವರುಗಳೊಡನೆ ನಮ್ಮ ರಾಜ್ಯದ ಅಧಿಕಾರಿಗಳು ಈ ಬಗ್ಗೆ ಮಾತುಕತೆಯಾಡಲು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಅಲ್ಲಿನ ಮುಖ್ಯ ಮಂತ್ರಿಯವರಿಗೆ ಪತ್ರವನ್ನು ಬರೆದಿದ್ದೇವೆ. ಹಾಗೂ ಇದರ ಬಗ್ಗೆ ಪ್ರಯತ್ನ ಮಾಡುತ್ತಿದ್ದೇವೆ.

ಕೊಳ್ಳೇಗಾಲದ ಟೌನ್‌ನಲ್ಲಿ ಹರಿಜನ ಗಿರಿಜನರ ವಿದ್ಯಾರ್ಥಿನಿಲಯ ನಿರ್ಮಿಸುವ ಬಗ್ಗೆ.

151 - ಶ್ರೀ ಎಂ. ಸಿದ್ಧಮಾದಯ್ಯ (ಕೊಳ್ಳೇಗಾಲ) : ಮಾನ್ಯ ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೊಳ್ಳೇಗಾಲದ ಪಟ್ಟಣದಲ್ಲಿರುವ ಶ್ರೀ ಮಹದೇಶ್ವರ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿನಿಲಯವಿಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ, ಹಿಂದಿನ ಸರ್ಕಾರವು ಸದರೀ ವಿದ್ಯಾರ್ಥಿನಿಲಯವನ್ನು ನಿರ್ಮಿಸುವ ಬಗ್ಗೆ ಆಯವ್ಯಯದಲ್ಲಿ ಸೇರಿಸಿದಾಗ್ಯೂ ಸಹ ಅದನ್ನು ಕೈಬಿಟ್ಟಿರಲು ಕಾರಣವೇನು?

ಇ) ವಿದ್ಯಾರ್ಥಿಗಳಿಗೆ ತುಂಬಾ ಅನಾನುಕೂಲವುಂಟಾಗಿರುವುದರಿಂದ ತಕ್ಷಣ ಈ ಕಾರ್ಯವನ್ನು ಕೈಗೊಳ್ಳಲಾಗುವುದೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು):

ಅ) ಹೌದು

ಆ) ಹಿಂದಿನ ಸರ್ಕಾರವು ಈ ವಿದ್ಯಾರ್ಥಿನಿಲಯ ಕಟ್ಟಡದ ನಿರ್ಮಿಸುವ ಬಗ್ಗೆ ಆಯವ್ಯಯದಲ್ಲಿ ಸೇರಿಸಿಲ್ಲ.

ಇ) 1991-92ನೇ ಸಾಲಿನಲ್ಲಿ ಈ ಕಟ್ಟಡದ ನಿರ್ಮಾಣ ಕಾರ್ಯವನ್ನು ಕೈಗೊಳ್ಳುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ಸಿದ್ಧಮಾದಯ್ಯ : ಕೊಳ್ಳೇಗಾಲದಲ್ಲಿ ಹರಿಜನ ಗಿರಿಜನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕಟ್ಟುವುದಕ್ಕೆ 1986-87ರಲ್ಲೇ ಸ್ಯಾಂಕ್ಷನ್ ಆಗಿರುವುದನ್ನು ನಿಮ್ಮ ಇಲಾಖೆಯವರು ಕ್ಯಾನ್ಸಲ್ ಮಾಡಿ, ಅಲ್ಲಿ ಕಟ್ಟಡವನ್ನು ಕಟ್ಟಿಸದೇ ಇರುವುದಕ್ಕೆ ಕಾರಣವೇನು?

ಶ್ರೀ ಬಿ. ಶಿವಣ್ಣ (ಕಾನೂನು ಹಾಗೂ ಸಮಾಜ ಕಲ್ಯಾಣ ಮಂತ್ರಿ) : ಈಗ ನಾವು ಅಧಿಕಾರಕ್ಕೆ ಬಂದಮೇಲೆ 90-91ರಲ್ಲಿ ಇದನ್ನು ಸ್ಯಾಂಕ್ಷನ್ ಮಾಡಿದ್ದೇವೆ. ಇದನ್ನು ಕಟ್ಟುವುದಕ್ಕೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ಗೆ ವಹಿಸಿದ್ದೇವೆ.

ಶ್ರೀ ಎಂ. ಸಿದ್ಧಮಾದಯ್ಯ : ಎಷ್ಟು ಹಣ ಸ್ಯಾಂಕ್ಷನ್ ಆಗಿತ್ತು?

ಅಧ್ಯಕ್ಷರು: ಮೊದಲು ಸ್ಯಾಂಕ್ಷನ್ ಆಗಿರಲಿಲ್ಲ, ಈಗ ಇವರು ಸ್ಯಾಂಕ್ಷನ್ ಮಾಡಿದ್ದಾರೆ.

ಶ್ರೀ ಎಂ. ಸಿದ್ಧಮಾದಯ್ಯ : ಎಷ್ಟು ಹಣವನ್ನು ಸ್ಯಾಂಕ್ಷನ್ ಮಾಡಿದ್ದಾರೆ ಈ ಕೆಲಸಕ್ಕೆ?

ಶ್ರೀ ಬಿ. ಶಿವಣ್ಣ : ಈ ಕೆಲಸವನ್ನು 1991-92ರಲ್ಲಿ ತೆಗೆದುಕೊಂಡಿದ್ದೇವೆ. ಎಷ್ಟೇ ಹಣ ಖರ್ಚಾದರೂ ಇದನ್ನು ಕಟ್ಟಿಸುತ್ತೇವೆ.

ಅಧ್ಯಕ್ಷರು : ಎಷ್ಟು ಹಣ ಖರ್ಚಾದರೂ ಇದನ್ನು ಕಟ್ಟಿಸುತ್ತೇವೆಂದು ಹೇಳುತ್ತಿದ್ದಾರೆ.

ಶ್ರೀ ಎಂ. ಸಿದ್ಧಮಾದಯ್ಯ : ಇದು ಸ್ವಲ್ಪ ಕನ್‌ಫ್ಯೂಜನ್ ಆಗುತ್ತದೆ. ಏಕೆಂದರೆ, 91-92ರಲ್ಲಿ ತೆಗೆದುಕೊಂಡಿದ್ದಾರೆಂದರೆ, ಇನ್ನೂ 9-10 ತಿಂಗಳು ಅಥವಾ ಒಂದು ವರ್ಷವೇ ಬೇಕಾಗುತ್ತದೆ ಈ ಕೆಲಸವನ್ನು ತೆಗೆದುಕೊಳ್ಳಲು ಆದಷ್ಟು ಶೀಘ್ರವಾಗಿ ಇದನ್ನು ಮಾಡಿಸುವ ವ್ಯವಸ್ಥೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ : ಆಗಬಹುದು, ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ಗೆ ಹೇಳಿದ್ದೇವೆ.

ಅಧ್ಯಕ್ಷರು : ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ಗೆ ಹೇಳಿದ್ದಾರೆ.

ಶ್ರೀ ಎಂ. ಸಿದ್ಧಮಾದಯ್ಯ : ಈ ಕೆಲಸವನ್ನು ಲ್ಯಾಂಡ್ ಆರ್ಮಿ ಕಾರ್ಪೊರೇಷನ್‌ಗೆ ವಹಿಸಿದ್ದೀರಿ. ಹಿಂದೆ ಅವರು ಒಳ್ಳೆಯ ಕೆಲಸವನ್ನು ಮಾಡುತ್ತಿದ್ದರು. ಆದುದರಿಂದ ಸರ್ಕಾರ ಅವರಿಗೆ ಅಪ್ಪಣೆ ಕೊಡುತ್ತಿತ್ತು. ಈಗ ಅವರು ಕಡಿಮೆ ದರ್ಜೆಯ ಕೆಲಸವನ್ನು ಮಾಡುತ್ತಿದ್ದಾರೆ. ಅನುಕೂಲವಾದ, ಬಿಗಿಯಾದ ಕಟ್ಟಡವನ್ನು ನಿರ್ಮಾಣ ಮಾಡಿಸುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುವುದೆ? ಅಥವಾ ಈ ಕೆಲಸವನ್ನು ಬೇರೆಯವರಿಗೆ ವಹಿಸಲು ಸಾಧ್ಯವೇ?

ಶ್ರೀ ಬಿ. ಬಸವಲಿಂಗಪ್ಪ (ಗ್ರಾಮೀಣಾಭಿವೃದ್ಧಿ ಪಂಚಾಯತ್‌ರಾಜ್ ಮತ್ತು ಪಶು ಸಂಗೋಪನೆ ಮಂತ್ರಿ) : ನಮ್ಮಲ್ಲಿ ಇಂತಹ ದೂರುಗಳು ಕೆಲವಿದೆ. ಈಗ ಸರಿಯಾದ ಕಟ್ಟಡವನ್ನು ಕಟ್ಟುವುದಕ್ಕೆ ನಾವು ಆದೇಶವನ್ನು ಕೊಟ್ಟಿದ್ದೇವೆ.

ಪರಿಶಿಷ್ಟ ಜಾತಿ ಮತ್ತ ಪರಿಶಿಷ್ಟ ವರ್ಗದ ಅಭಿವೃದ್ಧಿ ಯೋಜನೆಗಳ ಬಗ್ಗೆ

816 - ಶ್ರೀ ಸಾದತ್ ಅಲಿ ಖಾನ್ (ಚನ್ನಪಟ್ಟಣ) : ಮಾನ್ಯ ಕಾನೂನು ಮತ್ತು ಸಮಾಜ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಸರ್ಕಾರ 1989-90ನೇ ಸಾಲಿಗೆ ಮತ್ತು 1990-91ನೇ ಸಾಲಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ಸಲುವಾಗಿ ಯಾವುದಾದರೂ ಕಾರ್ಯಕ್ರಮಗಳನ್ನು ಅನುಷ್ಠಾನಕ್ಕೆ ತಂದಿದೆಯೇ?

(ಆ) ಇವರ ಅಭಿವೃದ್ಧಿಗಾಗಿ ಯಾವುದಾದರೂ ಹೊಸ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿದೆಯೇ?

ಶ್ರೀ ಬಿ. ಶಿವಣ್ಣ (ಕಾನೂನು ಮತ್ತು ಸಮಾಜ ಕಲ್ಯಾಣ ಸಚಿವರು)

(ಅ) ಹೌದು.

ಅನುಬಂಧ ಲಗತ್ತಿಸಲಾಗಿದೆ.

ಆ) ಹೌದು

ಎಲ್.ಪಿ.ಜಿ. ಜೋಡಣೆ, ಗ್ರಂಥಾಲಯ, ಒಳ್ಳೆಯ ಪಾತ್ರೆಗಳು ಮತ್ತು ಆರೋಗ್ಯ ತಪಾಸನೆ ಹೊಸ ಯೋಜನೆಗಳಾಗಿವೆ.